ಅದು ಮಾಡಲಿಕ್ಕಾಗುವುದಿಲ್ಲ. ಈ ಒಂದು ಇಲಾಖೆ ಸರ್ವಸನ್ನದ್ಧವಾಗಿರಬೇಕು. ಅದಕ್ಕೆ ಬೇಕಾದ ನಿರ್ದೇಶಕರು ಇರಬೇಕಾಗುತ್ತದೆ. ಕಳೆದ ಎರಡು ವರ್ಷಗಳಿಂದ ಆ ಇಲಾಖೆಗೆ ನಿರ್ದೇಶಕರಿಲ್ಲದೆ ಇರುವುದರಿಂದ ಪ್ರಗತಿ ಕುಂಠಿತವಾಗಿದೆ. ಸುಮಾರು ಗ್ರಾಮಾಂತರ...

ಅಧ್ಯಕ್ಷರು : ಕ್ವೊಶ್ಚನ್ ಕ್ವೊಶ್ಚನ್.

ಶ್ರೀ ಪಿ. ಬಸವರಾಜು : ಅಧ್ಯಕ್ಷರೆ, ಆದ್ದರಿಂದ ಆ ಇಲಾಖೆಗೆ ಯಾವಾಗ ನಿರ್ದೇಶಕರನ್ನು ನೇಮಕ ಮಾಡುತ್ತೀರಿ? ಮತ್ತು ಏನು ಕೊರತೆ ಬಂದಿರುವ ಸಿಬ್ಬಂದಿ ವರ್ಗ ಇದೆ, ಅದರ ನೇಮಕಾತಿ ಮಾಡಲಿಕ್ಕೆ ಯಾವ ಕ್ರಮ ತೆಗೆದುಕೊಳ್ಳುತ್ತೀರೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಶಿಕ್ಷಣ ಸಚಿವರ ಪರವಾಗಿ): 1986ನೇ ಇಸವಿಯಲ್ಲಿ ನಿರ್ದೇಶಕರನ್ನು ಜೇಷ್ಠತಾ ಆಧಾರದ ಮೇಲೆ ಸರ್ಕಾರ ನೇಮಕ ಮಾಡಿತ್ತು. ಆದರೇ ಅದರಲ್ಲಿ ದೋಷ ಇತ್ತೆಂದು ನ್ಯಾಯಾಲಯಕ್ಕೆ ಹೋಗಿದ್ದ ಪರಿಣಾಮವಾಗಿ 1990 ರಲ್ಲಿ ನ್ಯಾಯಾಲಯ ಒಂದು ಆಜ್ಞೆಯನ್ನು ಕೊಡುವುದರ ಜೊತೆಗೆ ಕೆಲವು ಗೈಡ್ ಲೈನ್ಸ್ ಕೂಡ ಕೊಟ್ಟಿದೆ. ಆ ಹಿನ್ನಲೆಯಲ್ಲಿ ಸರ್ಕಾರ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದೆ. ಕೂಡಲೇ ಜೇಷ್ಠತಾ ಪಟ್ಟಿಯನ್ನು ಪ್ರಕಟಣೆ ಮಾಡುವ ಮೂಲಕ ಇಲಾಖೆಯಿಂದ ಭಡ್ತಿ ಕೊಟ್ಟು ನಿರ್ದೇಶಕರನ್ನು ನೇಮಕ ಮಾಡತಕ್ಕಂಥ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಮತ್ತೊಂದು ಮಾತನ್ನು ಹೇಳಬಯಸುತ್ತೇನೆ. ಸಿಬ್ಬಂದಿ ಕೊರತೆ ನೀಗಲು 1810 ಜನ ಬೇಕು ಅನ್ನತಕ್ಕಂಥಾದ್ದನ್ನು ಇಲಾಖೆಯವರು ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಆರ್ಥಿಕ ನಿರ್ಬಂಧದ ಪರಿಸ್ಥಿತಿಯಿಂದಾಗಿ ಇವರಿಗೆ ಮಂಜೂರಾತಿ ಸಿಗಲಿಲ್ಲ. ಈಗ ಇಲಾಖೆಯವರು ಅರ್ಥ ಇಲಾಖೆಯವರ ಮೇಲೆ ಇದರ ಅಗತ್ಯತೆಯನ್ನು ಒತ್ತಿ ಹೇಳುವ ಮೂಲಕ ಅದರ ಮಂಜೂರಾತಿಯನ್ನು ಶೀರ್ಘದಲ್ಲೇ ಪಡೆಯುವವರಿದ್ದಾರೆ. ನಂತರ ಎಲ್ಲಾ ಖಾಲಿ ಇರತಕ್ಕಂಥ ಸ್ಥಾನಗಳನ್ನು ಭರ್ತಿ ಮಾಡಿ ಲೈಬ್ರರಿಯ ಉಪಯೋಗ ಎಲ್ಲರಿಗೂ ಸಿಗುವಂಥ ರೀತಿಯಲ್ಲಿ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು : ಶ್ರೀ ಎನ್. ತಮ್ಮಣ್ಣ ಅವರ ಪ್ರಶ್ನೆ ಹೆಲ್ಡ್ ಓವರ್ ಆಗಿದೆ. ಇದನ್ನು 27ನೇ ತಾರೀಖು ಹಾಕುತ್ತೇನೆ.

ಚಿತ್ತಾಪುರ ತಾಲ್ಲೂಕಿನ ಶಾಲೆಗಳಲ್ಲಿ ಶಿಕ್ಷಕರಿಲ್ಲದಿರುವುದು

3348 : ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ತಾಪುರ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆ, ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಉಪನ್ಯಾಸಕರು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮೇಲ್ಕಂಡ ಶಾಲೆಗಳಲ್ಲಿ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದರೂ ಕೂಡ ಇಲ್ಲಿಯವರೆವಿಗೂ ಪ್ರಯೋಜನವಾಗದಿರುವುದಕ್ಕೆ ಕಾರಣಗಳೇನು? ಸರ್ಕಾರ ಇದರ ಬಗ್ಗೆ ಯಾವ ಕ್ರಮ ಕೈಗೊಂಡಿದೆ.?

ಇ) ಮೇಲ್ಕಂಡ ಪ್ರಾಥಮಿಕ ಶಾಲೆ, ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲೂ ಸರ್ಕಾರದವರು ಕೈಗೊಂಡಿರವ ಕ್ರಮವೇನು?

ಈ) ಚಿತ್ತಾಪುರ ತಾಲ್ಲೂಕಿನ ಪ್ರಾಥಮಿಕ ಶಾಲೆ ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?